### ಸಕಾಲಿಕ ಸಂಪಾದಕೀಯ

ಮಕ್ಕಳೊಂದಿಗೆ ಶಿಕ್ಷಕರ ಚೈತನ್ಯವನ್ನೂ ಉಳಿಸಿಕೊಳ್ಳುವುದು ಸದ್ಯದ ತುರ್ತು ಎನ್ನುವುದನ್ನು ಹೇಳುವ ಸಂಪಾದಕೀಯ 'ನಿಮ್ಮೊಡನೆ (ರಘುನಾಥ ಚ.ಹ., ಜೂ. 3) ಸಕಾಲಿಕ. ಸಮಾಜದಲ್ಲಿ ಗುರುವಿಗೆ ಇರುವ ಮಹತ್ವವನ್ನು ಕಡೆಗಣಿಸಿರುವ ಸರ್ಕಾರ, ಶಿಕ್ಷಕರಿಗೆ ಭೂಷಣವಲ್ಲದ ಕೆಲಸಗಳಲ್ಲಿ ತೊಡಗಿಸಿರುವುದು ಖೇದಕರ. ಶಿಕ್ಷಕರನ್ನು ಜೀತದಾಳಿನಂತೆ ನಡೆಸಿಕೊಂಡಿದೆ ಎನ್ನುವ ವಾಕ್ಯ ಅತಿಶಯೋಕ್ತಿಯಲ್ಲ.

—ರವಿರಾಜ ಬೈಕಂಪಾಡಿ, ಸುರತ್ಕಲ್

### ಗಮನಾರ್ಹ ಕಥೆ

ಪಿ.ಬಿ. ಪ್ರಸನ್ನ ಬರೆದ 'ನಿರ್ವಾಣ' ಕಥೆ (ಜೂನ್ 3) ವಾಸ್ತವಕ್ಕೆ ಹತ್ತಿರವಾಗಿದೆ. ಮಕ್ಕಳಿಲ್ಲದ ದಂಪತಿ ಒಡಹುಟ್ಟಿದವರನ್ನೇ ಮಕ್ಕಳೆಂದು ಪೋಷಿಸಿದವರನ್ನೇ ಹೊರಹಾಕುವ ಪ್ರಸಂಗಗಳು ನಮ್ಮ ಸುತ್ತಲಿನ ಸಮಾಜದಲ್ಲಿಯೇ ಸಾಕಷ್ಟಿವೆ.

—ಎಂ.ಟಿ.ಮಂಜುನಾಥ್, ಎನ್.ಎಸ್. ಚಂದ್ರಶೇಖರ್, ಶೈಲಜಾ ಜೋಷಿ

### ಕಲಿಕೆಯ ಆತಂಕ

ಎ.ಪಿ. ಅಶ್ವಿನ್‌ಕುಮಾರ್ ಅವರ 'ಮಕ್ಕಳ ಕಲಿಕೆ:ಮುಂದೇನು?' (ಜೂ.3) ಪೋಷಕರ ಆತಂಕವನ್ನು ಹಿಡಿದಿಟ್ಟಿದೆ. ಲಾಕ್‌ಡೌನ್ ಹಂತಹಂತವಾಗಿ ತೆರೆವುಗೊಳಿಸುವಾಗ ಜನರ ಮೂಲಭೂತ ಅವಶ್ಯಕತೆಗಳ ಮೊದಲ ಆದ್ಯತೆಯಲ್ಲಿ ಶಾಲೆಯೂ ಇರಲಿ. ಆನ್‌ಲೈನ್ ಕ್ಲಾಸುಗಳು ಶಾಲಾ ವಾತಾವರಣ ಕಲ್ಪಿಸಲು ಸಾಧ್ಯವಿಲ್ಲ. ಹಾಗೆಯೇ ಮನೆಯಲ್ಲಿ ಪೋಷಕರು ಶಿಕ್ಷಕರಾಗಲು ಸಾಧ್ಯವಿಲ್ಲ.

—ವಿದ್ಯಾ ಶೆಣೈ, ಕುಂದಾಪುರ;
ಕಮಲಾದೇವಿ ರಾಜಶೇಖರ್ ಹಳ್ಳೂರ್, ಬೆಂಗಳೂರು

ವೆಂಕಟೇಶ್ವರ ರಂಗ ಕಲಾ ಶಿಕ್ಷಕರಾಗಿ ಪ್ರಸ್ತುತ ಆನ್‌ಲೈನ್ ಶಿಕ್ಷಣದಲ್ಲಿ ತರಲೇಬೇಕಾದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗುರ್ತಿಸಿದ್ದಾರೆ. ಮಕ್ಕಳಲ್ಲಿ ಚರ್ಚೆಯ ರೂಪದಲ್ಲಿ ಹೊಸತನ್ನು ತರುವ ಪ್ರಯೋಗ ಅತ್ಯಂತ ಸೂಕ್ತ.

—ಎಂ.ಆರ್. ಚಂದ್ರಶೇಖರ್. ಬೆಂಗಳೂರು

### ಲಿವಿಯಾ ಡ್ರಸೆಲ್ಲಾ

ಚೈತ್ರಿಕಾ ನಾಯ್ಕ, ಹರ್ಗಿ ಅವರ ಲಿವಿಯಾ ಡ್ರಸೆಲ್ಲಾ (ಜೂನ್ 3) ಲೇಖನ ಚೆನ್ನಾಗಿತ್ತು. 'ತನ್ನ ಸುತ್ತಲಿನ ಹಲವು ಪ್ರತಿಮೆಗಳನ್ನು ಒಡೆಯುತ್ತಾ ತಾನೇ ಪ್ರತಿಮೆಯಾಗಿ ಹೋದಳು ಲಿವಿಯ' ಎಂಬುದು ಅದ್ಭುತ ಉಪಮೆ. ಸೌಂದರ್ಯದ ಜೊತೆಗೆ ಚಾತುರ್ಯ ಎನ್ನುವುದಕ್ಕೆ ಬದಲಾಗಿ ಸೌಂದರ್ಯದ ಜೊತೆ ಕ್ರೌರ್ಯ ಎರಕ ಹೊಯ್ದರೆ ಅದರ ಹೆಸರು ಲಿವಿಯ ಎಂದಿದ್ದರೆ ಹೆಚ್ಚು ಸೂಕ್ತವಾಗುತ್ತಿತ್ತು.

—ಬಿ. ಗೋಪಾಲ್ ಸಿಂಗ್, ಮೈಸೂರು

ಮೇ 27 ಮತ್ತು ಜೂನ್ 3ರ ಎರಡೂ ಸಂಚಿಕೆಗಳು ಮಕ್ಕಳಿಗೆ ಮೀಸಲಾಗಿದ್ದು ಸೂಕ್ತವಾಗಿತ್ತು. ರೋಮ್ ಸಾಮ್ರಾಜ್ಯದ ಲಿವಿಯಾ ಡ್ರಸೆಲ್ಲಾ ಕುರಿತ ಲೇಖನ ತುಂಬಾ ಚೆನ್ನಾಗಿದೆ.

—ರಮೇಶ್ ಜವಳಗಿ, ಬನಹಟ್ಟಿ

### ಯುರೋಪಿನ ಬೀದಿ ಕಲಾವಿದರು



ರಹಮತ್ ತರೀಕೆರೆ ಅವರ 'ಯುರೋಪಿನ ಬೀದಿಕಲಾವಿದರು' (ಜೂನ್ 3) ಲೇಖನ ಪಾಶ್ಚಾತ್ಯ ಹಾಗೂ ನಮ್ಮ ದೇಶದ ಬೀದಿಕಲಾವಿದರ, ಅದರಲ್ಲೂ ಮುಖ್ಯವಾಗಿ ವಿವಿಧ ವಾದ್ಯಗಳ ಗಾಯಕರ ಕಲೆಯ ವಿವಿಧ ಆಯಾಮಗಳನ್ನು ಕಟ್ಟಿಕೊಟ್ಟಿರುವ ರೀತಿ ಓದುಗರನ್ನು ಸೆಳೆಯುವಂತಿದೆ. ಕಲೆ ಥಿಯೇಟರ್‌ಗಳಿಂದ ಬೀದಿಗೆ ಇಳಿದಾಗ ಕಲೆಯಲ್ಲಿ ಬೇಡುವಿಕೆಯ ದನಿಸೇರಿ ಅದರ ಘನತೆಯನ್ನು ತುಸು ಇಳಿಸುತ್ತದೆ ಎಂಬ ಲೇಖಕರ ಕಾಣ್ಕೆ ಮನಕಲಕಿತು.

—ಕಂಚಿ ಕೋಲಾಪಲ್

ತರೀಕೆರೆ ಅವರ ಲೇಖನ ಓದಿ ನನಗೆ 'ಜೇಮ್ಸ್ ಬೋವೆನ್' ಎಂಬ ಬೀದಿ ಕಲಾವಿದನ ಜೀವನ ಆಧರಿಸಿದ 'ಎ ಸ್ಟ್ರೀಟ್ ಕ್ಯಾಟ್ ನೇಮ್ಡ್ ಬಾಬ್' ಸಿನಿಮಾ ನೆನಪಾಯ್ತು.

—ಹೇಮಾ ಗೋಪಾಲ್, ಬೆಂಗಳೂರು

ರಹಮತ್ ತರೀಕೆರೆ ಅವರ ಲೇಖನ ಚೆನ್ನಾಗಿದೆ. ಆದರೆ ಒಂದು ಕಡೆ ಅವರು ಕದ್ರಿ ಗೋಪಾಲನಾಥ್ ಕ್ಲಾರಿಯೊನೆಟ್ ನುಡಿಸುತ್ತಿದ್ದರು ಎಂದು ಉಲ್ಲೇಖಿಸಿದ್ದಾರೆ. ಅವರು ನುಡಿಸುತ್ತಿದ್ದ ವಾದನ ಸ್ಯಾಕ್ಸೋಫೋನ್.

—ವರ್ಷಾ ಸುಧೀಂದ್ರ

### ನೆಚ್ಚಿನ 'ಸುಧಾ'

ಐದಾರು ದಶಕಗಳಿಂದಲೂ 'ಸುಧಾ' ಪತ್ರಿಕೆಯ ಯಾವುದೇ ಸಂಚಿಕೆಯನ್ನು ತಪ್ಪಿಸದೇ ಓದುತ್ತಿರುವ ಓದುಗರಲ್ಲಿ ನಾನೂ ಒಬ್ಬ. 'ಸುಧಾ'ದಲ್ಲಿ ಪ್ರಕಟವಾಗುವ ಧಾರ್ಮಿಕ, ವೈಚಾರಿಕ, ವೈದ್ಯಕೀಯ, ವೈಜ್ಞಾನಿಕ, ಸಾಮಾಜಿಕ, ಮನೋರಂಜನಾ ಕ್ಷೇತ್ರಗಳಿಗೆ ಸಂಬಂಧಿಸಿದ ಮೌಲಿಕ ಲೇಖನಗಳಷ್ಟೇ ಅಲ್ಲದೇ ವಾರವಾರವೂ ಕುತೂಹಲದಿಂದ ಓದುವಂತೆ ಮಾಡುವ ಅಂಕಣಗಳು, ಧಾರಾವಾಹಿ, ಕಥೆ, ವಿಚಾರಲಹರಿ, ಹಾಸ್ಯ ಹಾಗೂ ಇನ್ನಿತರ ತಲೆಬರಹದಡಿ ಬರುವ ಲೇಖನಗಳು ಉಪಯುಕ್ತವಾಗಿವೆ. ಒಂದು ಸಂಚಿಕೆ ಓದಿ ಮುಗಿದರೆ ಮತ್ತೆ ಗುರುವಾರ ಎಷ್ಟು ಬೇಗ ಬರುತ್ತದೋ ಹೊಸ ಸಂಚಿಕೆ ಯಾವಾಗ ಕೈ ಸೇರುತ್ತದೋ ಎನ್ನುವ ಕಾತರ. ನಾವು 'ಸುಧಾ'ಳಿಗೆ ತುಂಬಾನೇ ಉಪಕೃತರಾಗಿದ್ದೇವೆ.

'ಸುಧಾ'ದಲ್ಲಿ ಪ್ರಕಟವಾಗುತ್ತಿದ್ದ 'ವಂಡರ್ ಪುಟ', ಸಂಖ್ಯಾಸ್ವಾರಸ್ಯ, ಎಳೆಯರ ಜ್ಞಾನ ಕೋಶ, ನಿಮಗೆಷ್ಟು ಗೊತ್ತು ಹಾಗೂ ಈಗಲೂ ಪ್ರಕಟವಾಗುತ್ತಿರುವ 'ಪ್ರಶ್ನಾಂಕಣ' ಪುಟಗಳನ್ನು ನಮ್ಮ ಆಶ್ರಮದ ಗ್ರಂಥಾಲಯದಲ್ಲಿ ಸಂಗ್ರಹಿಸಲಾಗಿದೆ. ಇದನ್ನು ನೋಡಿದವರೆಲ್ಲರೂ ಆಶ್ಚರ್ಯದಿಂದ ಉದ್ಗಾರ ತೆಗೆಯುವುದರ ಮೂಲಕ ಶ್ಲಾಘಿಸುತ್ತಾರೆ. ಆ ಶ್ಲಾಘನೆ ನಮ್ಮೆಲ್ಲರ ಪ್ರೀತಿಯ 'ಸುಧಾ'ಳಿಗೆ ಸಲ್ಲಬೇಕು.

—ಶ್ರೀಶಿವಲಿಂಗೇಂದ್ರಸ್ವಾಮಿಗಳು, ಚಾಮರಾಜನಗರ

### ಸಲಾಂ ಜೆರೂಸಲೆಮ್



ಆನಂದತೀರ್ಥ ಪ್ಯಾಟಿ ಅವರು ಬರೆದಿರುವ 'ಸಲಾಂ ಜೆರೂಸಲೇಮ್ ಪ್ರವಾಸಕಥನ ತುಂಬಾ ಚೆನ್ನಾಗಿತ್ತು. ಸರಿಯಾದ ಸಮಯಕ್ಕೆ ಪ್ರಕಟವಾಗಿದೆ. ಚಿತ್ರಗಳೂ ಅಷ್ಟೇ ಸುಂದರವಾಗಿವೆ.

—ಆನಂದ್ ಲೀಲಮ್ಮ, ಯಲಹಂಕ

ನಾನು ನೋಡದ, ನೋಡಲಿಕ್ಕೂ ಆಗದ ದೇಶವೊಂದನ್ನು ನನ್ನ ಮುಂದೆ ಕಣ್ಣಮುಂದೆ, ನಾನೇ ಆ ದೇಶಕ್ಕೆ ಹೋಗಿ ನೋಡಿದಂತೆ ಕಟ್ಟಿಕೊಟ್ಟ ಲೇಖಕರಿಗೆ ಧನ್ಯವಾದಗಳು. ಮೂರು ಧರ್ಮಗಳ ತವರೂರಾದ ದೇಶದಲ್ಲಿ ಜನರು ಸದಾ ಭಯದ ನೆರಳಲ್ಲೇ ದಿನಗಳನ್ನು ದೂಡುತ್ತಿರುವುದು ವಿಷಾದದ ಸಂಗತಿ.

—ಸೇತುರಾವ್ ಕುಲಕರ್ಣಿ, ವಿ. ಹೇಮಂತ ಕುಮಾರ್, ಬೆಂಗಳೂರು.

ಬರಹ ಸುಂದರ, ಸುಲಲಿತ. ಎಂತಹ ಸೊಬಗಿನ ನಗರಿ ಜೆರೂಸಲೆಮ್ ಎಂಬ ಸತ್ಯವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಈ ದೇಶ ಮತ್ತು ನಗರ ಮೂರು ಧರ್ಮಗಳ ಸಂಗಮ ಕ್ಷೇತ್ರವಾಗಿ ಶಾಂತಿಯಿಂದ ಕೂಡಿದ್ದರೆ ಎಷ್ಟು ಚೆನ್ನ.

—ರಮೇಶ್ ರಾವ್, ಕೈಕಂಬ, ವಿನಾಯಕ ಕೆ.ಆರ್., ಬೈಲಹೊಂಗಲ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in